APRIL 04, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ವಕ್ಫ್ ತಿದ್ದುಪಡಿ ಮಸೂದೆ 2025, ಉಮ್ಮೀದ್; ರಾಜ್ಯಸಭೆ ಅನುಮೋದನೆ.**
- **ರಾಜ್ಯದಲ್ಲಿ, 'ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ' ರಚನೆ – ಸಂತೋಷ ಲಾಡ.**
- **ನರೇಗಾ ಯೋಜನೆ; ಮಾನವ ದಿನಗಳ ಸೃಜನೆಯಲ್ಲಿ, ಮೈಸೂರು ಜಿಲ್ಲಾ ಪಂಚಾಯಿತಿ, ಗುರಿ ಮೀರಿ, ಸಾಧನೆ.**
- **ವಿದೇಶಿ, 'ಮಟೋವಾ ಹಣ್ಣು' ಬೆಳೆದ, ಉತ್ತರಕನ್ನಡ ಜಿಲ್ಲೆ ಯಲ್ಲಾಪುರದ, ಕೃಷಿಕ ಪ್ರಸಾದ ರಾಮ ಹೆಗಡೆ.**

<><><>

**ಈಗ ವಾರ್ತೆಗಳ ವಿವರ**

<><><>

**ವಕ್ಫ್ ತಿದ್ದುಪಡಿ ಮಸೂದೆ –2025, 'ಉಮ್ಮೀದ್' ರಾಜ್ಯಸಭೆಯಲ್ಲಿ 12 ಗಂಟೆಗಳ ಸುಧೀರ್ಘ ಚರ್ಚೆಯ ಬಳಿಕ, ತಡರಾತ್ರಿ ಅಂಗೀಕಾರವಾಗಿದೆ. ರಾಜ್ಯಸಭೆಯ 128 ಜನ ಸಂಸದರು, ಮಸೂದೆಯ ಪರವಾಗಿ ಹಾಗೂ 95 ಜನ ಸಂಸದರು, ಮಸೂದೆಯ ವಿರುದ್ಧ ತಮ್ಮ ನಿಲುವು ವ್ಯಕ್ತಪಡಿಸಿ, ಮತ ಚಲಾಯಿಸಿದರು. ಬಹುಮತಕ್ಕೆ ಬೇಕಾದ 119 ಮತಗಳಿಗಿಂತ, ಆರು ಹೆಚ್ಚು ಸ್ಥಾನಗಳನ್ನು ಆಡಳಿತ ಪಕ್ಷ ಬಿಜೆಪಿ ರಾಜ್ಯಸಭೆಯಲ್ಲಿ ಹೊಂದಿದೆ.**

<><><>

**ಇಂದು, ಮುಸಲ್ಮಾನ ವಕ್ಫ್ ರದ್ದತಿ ಕಾಯ್ದೆ 1923ನ್ನು ಅಲ್ಪ ಸಂಖ್ಯಾತರ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು ರಾಜ್ಯಸಭೆಯಲ್ಲಿ ಮಂಡಿಸಲಿದ್ದಾರೆ.**

<><><>

**ರಾಜ್ಯಸಭೆಯಲ್ಲಿ ಮಸೂದೆ ಅಂಗೀಕಾರಗೊಂಡ ಬಳಿಕ, ರಾಷ್ಟ್ರಪತಿಯವರ ಅಂಕಿತಕ್ಕೆ ಸಲ್ಲಿಕೆಯಾಗಲಿದೆ. ರಾಷ್ಟ್ರಪತಿಗಳ ಅನುಮೋದನೆ ಬಳಿಕ ಅಧಿಸೂಚನೆ ಪ್ರಕಟಗೊಂಡು, 'ಉಮ್ಮೀದ್ ಕಾಯ್ದೆ'ಯ ರೂಪದಲ್ಲಿ ಜಾರಿಗೆ ಬರಲಿದೆ.**

<><><>

**ಲೋಕಸಭೆಯಲ್ಲಿ ಎರಡೂ ಮಸೂದೆಗಳಿಗೆ, ಭಾರಿ ಬಹುಮತದಿಂದ ಈಗಾಗಲೇ ಅನುಮೋದನೆ ದೊರೆತಿದೆ.**

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಅನ್ವರ್ ಮಾಣಿಪ್ಪಾಡಿ ಅವರ ವರದಿ, ಕರ್ನಾಟಕದ ವಕ್ಫ್ ಬೋರ್ಡ್ ಬಗ್ಗೆ, ಸ್ಥೂಲ ಚಿತ್ರಣ ನೀಡಿದೆ, ಎಂದಿದ್ದಾರೆ. ವಕ್ಫ್‌ನಿಂದ ಬರುತ್ತಿರುವ ಆದಾಯಕ್ಕೆ ಲೆಕ್ಕ ಪರಿಶೋಧನೆ ಹಾಗೂ ಪಾರದರ್ಶಕತೆ ಸಹ ಇಲ್ಲ. ಹೊಸ ಮಸೂದೆ ಉಮ್ಮೀದ್, ಎಲ್ಲವನ್ನೂ ಪಾರದರ್ಶಕ ಗೊಳಿಸಿ, ವಿಶ್ವಾಸಾರ್ಹತೆ ಖಾತ್ರಿ ಪಡಿಸಲಿದೆ ಎಂದು, ಅವರು ಸ್ಪಷ್ಟ ಪಡಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕಿನ, ನಾರಾಯಣಪುರದ ಬಸವಸಾಗರ ಜಲಾಶಯದಿಂದ, ಎಡ–ಬಲದಂಡೆ ಕಾಲುವೆಗಳಿಗೆ, ಇಂದಿನಿಂದ ಮೂರು ದಿನಗಳ ವರೆಗೆ, ರೈತರ ಬೆಳೆಗಾಗಿ ನೀರು ಹರಿಸುವಂತೆ, ನ್ಯಾಯಮೂರ್ತಿ ಚಿಲ್ಲಕೂರು ಸುಮಲತಾ ನೇತೃತ್ವದ, ಕಲಬುರಗಿ ಉಚ್ಚ ನ್ಯಾಯಾಲಯ ಪೀಠ ಆದೇಶಿಸಿದೆ. ಮಾಜಿ ಸಚಿವ ನರಸಿಂಹ ನಾಯಕ್ ಸೇರಿದಂತೆ, ನಾಲ್ವರು ರೈತರು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಪರಿಗಣಿಸಿ, ಅಂದಾಜು, 4 ಲಕ್ಷ ಎಕರೆ ಪ್ರದೇಶದ ಬೆಳೆಗಳನ್ನು ರಕ್ಷಿಸಲು, ನ್ಯಾಯಪೀಠ ಈ ಕ್ರಮ ಕೈಗೊಂಡಿದ್ದಾಗಿ, ತಿಳಿಸಿದೆ.

<><><>

ಕಳೆದ 15 ದಿನಗಳಿಂದ ರೈತ ಸಂಘಟನೆಗಳು, ನೀರಿಗಾಗಿ ಆಗ್ರಹಿಸಿ, ವ್ಯಾಪಕ ಪ್ರತಿಭಟನೆ ನಡೆಸುತ್ತಿವೆ.

<><><>

ರಾಜ್ಯದಲ್ಲಿ, ಅರೆಕಾಲಿಕ, ಸೇವಾ ಭದ್ರತೆ ಇಲ್ಲದ, ಕಾರ್ಮಿಕರ ಸಾಮಾಜಿಕ ಹಾಗೂ ಸೇವಾ ಹಿತ ರಕ್ಷಣೆಗೆ, 'ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ' ರಚಿಸಲಾಗುವುದು; ವಿಶೇಷ ನಿಧಿ ಸಂಗ್ರಹಣೆಗೆ, ಶೇಕಡ 5ರಷ್ಟು ಸೆಸ್ ಆಕರಿಸಲಾಗುವುದು ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ, ಹೊಸ ದಿಲ್ಲಿಯಲ್ಲಿ ನಡೆದ ಸಭೆಯಲ್ಲಿ, ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಾಡಿನ ಶ್ರಮಿಕರ ಶ್ರಮಕ್ಕೆ ನ್ಯಾಯ ಒದಗಿಸುವ, ಬದ್ಧತೆ ತಮ್ಮ ಸರ್ಕಾರದ್ದು, ಎಂದಿದ್ದಾರೆ.

<><><>

ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ, ನರೇಗಾ ಯೋಜನೆಯಡಿ, ಮೈಸೂರು ಜಿಲ್ಲಾ ಪಂಚಾಯಿತಿ, ಶೇಕಡ 104 ರಷ್ಟು ಮಾನವ ದಿನಗಳ ಕೂಲಿ ಸೃಜಿಸಿ, ಗುರಿ ಮೀರಿ ಸಾಧನೆ ಮಾಡಿದೆ. ಮೈಸೂರು ಜಿಲ್ಲೆಯಾದ್ಯಂತ, 1 ಲಕ್ಷ 46 ಸಾವಿರದ 368 ಕುಟುಂಬಗಳ ಉದ್ಯೋಗ ಚೀಟಿ ಸಕ್ರಿಯವಾಗಿವೆ. 2 ಲಕ್ಷ 77 ಸಾವಿರದ 379 ಫಲಾನುಭವಿಗಳು, ಯೋಜನೆಯ ಲಾಭ ಪಡೆದುಕೊಂಡಿದ್ದಾರೆ. ಜಿಲ್ಲಾ ಪಂಚಾಯ್ತಿ ಸಿ.ಇ.ಒ. ಯುಕೇಶಕುಮಾರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಸಿ.ಇ.ಒ. ಯುಕೇಶ ಕುಮಾರ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ದಕ್ಷಿಣ ಏ ್ಯದಲ್ಲಿ ಹೆಚ್ಚು ಕಾಣಸಿಗುವ, 'ಮಟೋವಾ' ಹಣ್ಣಿನ ಗಿಡಗಳನ್ನು, ವಾಣಿಜ್ಯ ಬೆಳೆ ಅಡಕೆಗೆ ಪರ್ಯಾಯವಾಗಿ ಬೆಳೆದು, ಲಾಭ ಗಳಿಸುತ್ತಿದ್ದಾರೆ, ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ ಕಾನ್‌ಕೊಡ್ಲು ಹೆಮ್ಮಾಡಿಯ, ಪ್ರಯೋಗಶೀಲ ಕೃಷಿಕ ಪ್ರಸಾದ ರಾಮು ಹೆಗಡೆ. ವಿಟಮಿನ್ 'ಇ' ಹಾಗೂ 'ಸಿ' ಸಮೃದ್ಧವಾಗಿರುವ, ವಿದೇಶಿ ಮಟೋವಾ ಹಣ್ಣಿನ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದ್ದಾರೆ.

<><><>

ಯಲ್ಲಾಪುರ ಪ್ರಸಾದ ರಾಮು ಹೆಗಡೆ ಧ್ವನಿ 50 ಸೆಕೆಂದುಗಳು

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಕಮಲಾಪುರದ, ಹಂಪಿ ಕನ್ನಡ ವಿಶ್ವವಿದ್ಯಾಲಯದ, 33ನೇ ಘಟಿಕೋತ್ಸವ, 'ನುಡಿ ಹಬ್ಬ', ಇಂದು ಸಂಜೆ, 6.30ಕ್ಕೆ, ವಿಶ್ವವಿದ್ಯಾಲಯದ ನವರಂಗ ಬಯಲು ರಂಗ ಮಂದಿರದಲ್ಲಿ ಆಯೋಜಿತವಾಗಿದೆ. ರಾಜ್ಯಪಾಲ ಹಾಗೂ ಕುಲಾಧಿಪತಿ ಥಾವರಚಂದ್ ಗೆಹ್ಲೋಟ್, ನಾಡೋಜ ಪುರಸ್ಕಾರ ಹಾಗೂ ಪದವಿಗಳನ್ನು ಪ್ರದಾನಿಸಲಿದ್ದಾರೆ.

<><><>

ನಾಡೋಜ ಗೌರವಕ್ಕೆ ಭಾಜನರಾದ, ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ, ಶಿವರಾಜ ಪಾಟೀಲ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನ್ಯಾ. ಶಿವರಾಜ ಪಾಟೀಲ, ಧ್ವನಿ 35 ಸೆಕೆಂದುಗಳು

<><><>

ವಿಜಯಪುರದ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ, 'ರಾಷ್ಟ್ರೀಯ ಭಾವೈಕ್ಯತೆ ಶಿಬಿರ'ದಲ್ಲಿ, ರಾಷ್ಟ್ರದ 32ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ, ಎನ್.ಎಸ್.ಎಸ್. ಸ್ವಯಂಸೇವಕಿಯರು ಪಾಲ್ಗೊಂಡಿದ್ದರು.

<><><>

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯದ, ವಿದ್ಯಾರ್ಥಿನಿಯರಾದ ಸಹನಾ, ಅಮೃತಾ ಹಾಗೂ ಕಾವೇರಿ, ರಾಷ್ಟ್ರೀಯ ಸೇವಾ ಯೋಜನೆಯ, ರಾಷ್ಟ್ರ ಮಟ್ಟದ, ಉತ್ತಮ ಸ್ವಯಂಸೇವಕಿ ಪ್ರಶಸ್ತಿಗೆ, ಆಯ್ಕೆಯಾಗಿದ್ದಾರೆ. 'ಉತ್ತಮ ಎನ್.ಎಸ್.ಎಸ್. ಸ್ವಯಂಸೇವಕಿ' ಹಾಗೂ 'ಶಿಸ್ತಿನ ಎನ್.ಎಸ್.ಎಸ್. ಸ್ವಯಂಸೇವಕಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ, ಹಿರಿಯ ಸಾಹಿತಿ, ಪಿ.ವಿ.ನಾರಾಯಣ ಅವರ ನಿಧನಕ್ಕೆ, ಮುಖ್ಯಮಂತ್ರಿ ಸೇರಿದಂತೆ ಅನೇಕ ಗಣ್ಯರು ಶೋಕ ವ್ಯಕ್ತ ಪಡಿಸಿದ್ದಾರೆ.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗ, ಇಂದು ರಾಮನಗರ ಜಿಲ್ಲೆಯಲ್ಲಿ, ಸಾರ್ವಜನಿಕರ ಅಹವಾಲು ಆಲಿಕೆ ಸಭೆ ನಡೆಸಲಿದೆ.

<><><>

ರಾಜ್ಯ ರೆಡ್ ಕ್ರಾಸ್ ಸಂಸ್ಥೆ ಸಭಾಪತಿಯಾಗಿ ಆಯ್ಕೆಯಾದ, ಬಸ್ರೂರು ರಾಜೀವ್ ಶೆಟ್ಟಿಯವರಿಗೆ, ಉಡುಪಿಯಲ್ಲಿ ಸನ್ಮಾನಿಸಲಾಯಿತು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 86 ಜನ ಸಫಾಯಿ ಕರ್ಮಚಾರಿಗಳನ್ನು ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎ.ಬಿ. ಬಸವರಾಜು ತಿಳಿಸಿದ್ದಾರೆ.

<><><>

ಶಿವಮೊಗ್ಗದ, ಹೊಳೆ ಹೊನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, 'ಬೌದ್ಧಿಕ ಆಸ್ತಿ ಹಕ್ಕು' ಕಾರ್ಯಾಗಾರ, ಜರುಗಲಿದೆ.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸಮಾಜಕಾರ್ಯ ಅಧ್ಯಯನ ವಿಭಾಗ, ಬಿ.ಗುಡಿಹಾಳ ಗ್ರಾಮದಲ್ಲಿ ಆಯೋಜಿಸಿದ್ದ ಶಿಬಿರದಲ್ಲಿ, ರಾಷ್ಟ್ರೋತ್ಥಾನ ರಕ್ತ ನಿಧಿಗೆ, 13 ಯೂನಿಟ್ ರಕ್ತ ಸಂಗ್ರಹವಾಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಕ್ಫ್ ತಿದ್ದುಪಡಿ ಮಸೂದೆ 2025, ಉಮ್ಮೀದ್; ರಾಜ್ಯಸಭೆ ಅನುಮೋದನೆ.
- ರಾಜ್ಯದಲ್ಲಿ, 'ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ' ರಚನೆ – ಸಂತೋಷ ಲಾಡ.
- ನರೇಗಾ ಯೋಜನೆ; ಮಾನವ ದಿನಗಳ ಸೃಜನೆಯಲ್ಲಿ, ಮೈಸೂರು ಜಿಲ್ಲಾ ಪಂಚಾಯಿತಿ, ಗುರಿ ಮೀರಿ, ಸಾಧನೆ.
- ವಿದೇಶಿ, 'ಮಟೋವಾ ಹಣ್ಣು' ಬೆಳೆದ, ಉತ್ತರಕನ್ನಡ ಜಿಲ್ಲೆ ಯಲ್ಲಾಪುರದ, ಕೃಷಿಕ ಪ್ರಸಾದ ರಾಮು ಹೆಗಡೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>